## ಪ್ರಶ್ನೆಪತ್ರಿಕೆ -೧ ಪ್ರಥಮ ಭಾಷೆ ಕನ್ನಡ ೧೦ ನೇ ತರಗತಿ ಅಂಕಗಳು : ೧೦೦

### ಭಾಗ -'ಎ'

ಈ ಕೆಳಗಿನ ಪ್ರಶ್ನೆಗಳಿಗೆ ಒಂದೊಂದು ವಾಕ್ಯದಲ್ಲಿ ಉತ್ತರ ಬರೆಯಿರಿ. ೯*೧ =೯

೧. ಗೊರೂರು ಹೇಳಿದ ಯಾವ ವಿಚಾರಗಳು ಅಮೆರಿಕದ ಶಾಲೆಯ ವಿದ್ಯಾರ್ಥಿಗಳನ್ನು ರಂಜಿಸಿದವು ?

೨.ಅಂತರ್ಜೀವಿಗೆ ಯಾವುದು ದೊಡ್ಡ ಸಮಸ್ಯೆಯಾಗುತ್ತದೆ ?

೩.ಕೈಗಾರಿಕೆಗಳಿಗೆ ಹೆಚ್ಚಿನ ಪ್ರಾಶಸ್ತ್ಯನೀಡಿದ ವಿಶ್ವೇಶ್ವರಯ್ಯನವರು ಅದರ ಕುರಿತು ನೀಡಿದ ಘೋಷಣೆ ಯಾವುದು ?

೪. ದುಷ್ಟಬುದ್ಧಿಯು ಧರ್ಮಬುದ್ಧಿಯ ಮೇಲೆ ಹೊರಿಸಿದ ಆರೋಪ ಯಾವುದು ?

೫. ಯಾವ ಯೋಚನೆಯು ಶಾನುಬೋಗರ ವದನಾರವಿಂದದಲ್ಲಿ ಮುಗುಳುನಗೆ ಮೂಡಿಸಿತು ?

೬. ಹಗೆ ನಂಟಿನ ಕುರಿತು ಅರ್ಥಶಾಸ್ತ್ರದಲ್ಲಿ ಏನು ಹೇಳಲಾಗಿದೆ ?

೭.ನಿಷ್ಠೆಯುಳ್ಳ ಭಕ್ತನಿಗೆ ನಟ್ಟಡವಿಯೂ ಸಹ ಏನೆನಿಸುತ್ತದೆ ?

೮. ಅಜ್ಞಾನ ತೊಲಗಿಸಲು ಕವಯಿತ್ರಿ ಏನಾಗ ಬಯಸಿದ್ದಾರೆ ?

೯. ಮುದ್ದು ಪಾರಿವಾಳಗಳ ಜೋಡಿ ಎಲ್ಲಿ ಸಂಸಾರ ಹೂಡಿತ್ತು ?

ಈ ಕೆಳಗಿನವುಗಳಿಗೆ ಮೂರು ನಾಲ್ಕು ವಾಕ್ಯಗಳಲ್ಲಿ ಉತ್ತರ ಬರೆಯಿರಿ. ೧೦*೨=೨=

೧೦.ಸಾಧಕನ ಯೋಗಕ್ಷೇಮವನ್ನು ಸಮಾಜ ಹೇಗೆ ನಿರ್ವಹಿಸುತ್ತಿತ್ತು ?

೧೧. ಹೈದರಾಬಾದ್ ನಗರಲ್ಲಿ ವಿಶ್ವೇಶ್ವರಯ್ಯನವರು ಸಲ್ಲಿಸಿದ ಸೇವೆ ಯಾವುದು ?

೧೨. ಧರ್ಮಬುದ್ಧಿಯು ತನ್ನ ಬೆಳಗಿನ ಹೊತ್ತನ್ನು ಹೇಗೆ ಕಳೆದನು ?

೧೩. ಹುಲಿಯು ಹಿಂದಿನಿಂದ ಹಾರಿ ಕೊಲ್ಲದಿರಲು ಕಾರಣಗಳೇನು ?

೧೪. ನುಡಿ ಹೇಗಿರಬೇಕು ಎಂದು ಬಸವಣ್ಣನವರು ತಮ್ಮ ವಚನದಲ್ಲಿ ವಿಶ್ಲೇಷಿಸಿದ್ದಾರೆ ?

೧೫. ಗಡಿಯ ಆಚೆ -ಈಚೆ ಜೀವಿಗಳು ಏಕೆ ಶವವಾದವು ?

೧೬. ವಿಜ್ಞಾನಿಗಳ ವೈರುಧ್ಯ ಭಾವನೆಯನ್ನು ವಿವರಿಸಿರಿ.

೧೭. ಭರತ ಚಕ್ರವರ್ತಿಗೆ ತನ್ನ ಹೆಸರನ್ನು ಬರೆಸಲು ಏಕೆ ಸಾಧ್ಯವಾಗಲಿಲ್ಲ?

೧೮. ಅಂದವಾದ ಬರವಣಿಗೆಯ ಬಗ್ಗೆ ಗಾಂಧೀಜಿಯವರ ಅಭಿಪ್ರಾಯವೇನು ?

೧೯. ತಾವರೆಯ ಬೇರಿನ ಕುರಿತು ಇರುವ ಒಗಟನ್ನು ವಿವರಿಸಿ.

ಈ ಕೆಳಗಿನ ಹೇಳಿಕೆಗಳಿಗೆ ಸಂದರ್ಭ ಮತ್ತು ಸ್ವಾರಸ್ಯಗಳನ್ನು ಬರೆಯಿರಿ. ೪*೩ =೧೨

೨೦." ಮಿಕ್ಕ ಹೊನ್ನಿಂಗೆ ಜೀರ್ಣ ಜಿನಾಲಯಗಳಿಗೆ ಸೊದೆಯನಿಕ್ಕುವುದು. "

೨೧. "ನಾವು ಮನುಷ್ಯರು "

೨೨. "ಪಗಲೆನಿತಾನುಂ ದೀವಿಗಳುರಿದೊಡೇಂ "

mamatabhagwat1@gmail.com

೨೩. ''ಹೊಡೆದರೂ ಗುಂಡ ಕರುಣ ಇಲ್ಲದ್ಹಂಗ''

ಈ ಸಾಹಿತಿ /ಕವಿಗಳ ಸ್ಥಳ ,ಕಾಲ,ಕೃತಿ ,ಪ್ರಶಸ್ತಿ /ಬಿರುದುಗಳನ್ನು ಕುರಿತು ವಾಕ್ಯರೂಪದಲ್ಲಿ ಬರೆಯಿರಿ. ೨*೩=೬

೨೪. ಗೊರೂರು ರಾಮಸ್ವಾಮಿ ಅಯ್ಯಂಗಾರ್.

೨೫. ಲಕ್ಷ್ಮೀಶ

ಈ ಕೆಳಗಿನ ಪದ್ಯಭಾಗವನ್ನು ಪೂರ್ಣಗೊಳಿಸಿ. ೧*೪=೪

ನೀಲ ಮೇಘ ------------
----------------------
-----------------------
---------------------
ನೋಡಿದಿರಾ ?

ಅಥವಾ

ಯುಗ ಯುಗ -----------
---------------------
----------------------
-------------------
ನೋಡಿದಿರಾ ?

ಈ ಕೆಳಗಿನ ಪದ್ಯಭಾಗವನ್ನು ಓದಿ ಅರ್ಥಮಾಡಿಕೊಂಡು , ಅಡಕವಾಗಿರುವ ಮೌಲ್ಯವನ್ನಾಧರಿಸಿ ಸಾರಾಂಶ ಬರೆಯಿರಿ.

೧*೪=೪

೨೭. ಮತಗಳೆಲ್ಲವೂ ಪಥಗಳು ಎನ್ನುವ
ಹೊಸ ಎಚ್ಚರದೊಳು ಬದುಕೋಣ
ಭಯ -ಸಂಶಯದೊಳು ಕಂದಿದ ಕಣ್ಣೊಳು
ನಾಳಿನ ಕನಸನು ಬಿತ್ತೋಣ .

ಈ ಕೆಳಗಿನ ಪ್ರಶ್ನೆಗಳಿಗೆ ಎಂಟು ಅಥವಾ ಹತ್ತು ವಾಕ್ಯಗಳಲ್ಲಿ ಉತ್ತರ ಬರೆಯಿರಿ. ೨*೪=೮

೨೮. ರಾಮಲಕ್ಷ್ಮಣರಿಗೆ ಶಬರಿ ಮಾಡಿದ ಉಪಚಾರ ಮತ್ತು ಆದಕ್ಕೆ ರಾಮಲಕ್ಷ್ಮಣರ ಪ್ರತಿಕ್ರಿಯೆ ವಿವರಿಸಿ.

ಅಥವಾ

ನಂಬಿ ಕೆಟ್ಟವರಿಲ್ಲ ಎಂಬ ಮಾತು ಶಬರಿಯ ಪಾಲಿಗೆ ನಿಜವಾದ ಬಗೆ ವಿವರಿಸಿ.

೨೯. ಪಾಂಡವರು ತನ್ನ ಸೋದರರು ಎಂಬುದು ಅರಿವಾದಾಗ ಕರ್ಣನ ಮನದಲ್ಲಾದ ತಲ್ಲಣವನ್ನು ವಿವರಿಸಿ.

ಅಥವಾ

ಕರ್ಣನನ್ನು ದುರ್ಯೋಧನನಿಂದ ಆಗಲಿಸಲು ಕೃಷ್ಣನು ಕರ್ಣನಿಗೆ ಒಡ್ಡಿದ್ದ ಆಮಿಷಗಳೇನು ? ವಿವರಿಸಿ.

ಈ ಕೆಳಗಿನ ಗದ್ಯಭಾಗವನ್ನು ಓದಿಕೊಂಡು ,ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರ ಬರೆಯಿರಿ. ೧*೪ =೪(೨+೨)

೩೦. ಪಶ್ಚಿಮದ ಪ್ರಸಿದ್ಧ ಸಂಗೀತಗಾರ ಬಿಥೋವನ್ ಒಮ್ಮೆ ಗಾನಗೋಷ್ಠಿಯನ್ನು ಮುಗಿಸಿ ಮೇಲೆದ್ದಾಗ ಅವನ ಅದ್ಭುತ ಕಲಾನೈಪುಣ್ಯವನ್ನು ಕಂಡು ಕೇಳಿ ಚಕಿತರಾದ ಜನರೂ ,ಸ್ನೇಹಿತರೂ ,ಅಭಿಮಾನಿಗಳೂ ಅವನನ್ನು ಸುತ್ತುವರಿದರು. ಅವರೆಲ್ಲರೂ ಮೂಕವಿಸ್ಮಿತರಾಗಿ ಅವನನ್ನೇ ಬೆರಗುಗಣ್ಣುಗಳಿಂದ ನೋಡುತ್ತಿದ್ದರು. ಪ್ರಶಂಸೆಯ ಮಾತುಗಳನ್ನು ಹೇಳಲಾರದಷ್ಟು ಭಾವತನ್ಮಯರಾಗಿದ್ದರು ಅವರೆಲ್ಲ. ತನ್ನ ನಾದ ಮಾಧುರ್ಯದಿಂದ ಅಷ್ಟೊಂದು ಜನರ ಹೃನ್ಮನಗಳನ್ನು ಸೆಳೆದಿದ್ದನಾತ. ಆ ಗಂಭೀರ ಮೌನವನ್ನು ಉತ್ಸಾಹಿ ಮಹಿಳೆಯೊಬ್ಬಳು ತನ್ನ ಮಾತಿನಿಂದ ಭೇದಿಸಿದಳು. : ''ಮಹಾಶಯ , ದೇವರು ನನಗೆ ಈ ಅಸಾಧಾರಣ ಪ್ರತಿಭೆಯನ್ನು ಕೊಟ್ಟಿದ್ದರೆ …… '' ಎಂದವಳು ಉದ್ಗರಿಸಿದಳು.

ಬಿಥೋವನ್ ಹೀಗೆಂದ _ ''ನನ್ನಲ್ಲಿರುವುದೆಂದು ನೀನಂದುಕೊಂಡಿರುವ ಅಸಾಧಾರಣ ಪ್ರತಿಭೆ ದೇವರ ಕೊಡುಗೆ ಅನ್ನುತ್ತೀಯಾ ? ನೀನೂ ಈ ಕೊಡುಗೆಯನ್ನು ಪಡೆಯಬಹುದು .ಏನು ಮಾಡಬೇಕು ಗೊತ್ತೆ ? ದಿನವೂ ಎಂಟುಗಂಟೆಗಳ ಕಾಲ ನಲ್ವತ್ತು ವರ್ಷಗಳವರೆಗೆ ಪಿಯಾನೊ ಅಭ್ಯಾಸ ಮಾಡು .ಅಷ್ಟೇ ಸಾಕು ,ನೀನೂ ನನ್ನಂತೆಯೇ ಅದ್ಭುತ ಕೊಡುಗೆಯನ್ನು ಪಡೆಯುತ್ತಿ . ''

ಈ ಅನುಭವದ ಮಾತಿನ ಹಿನ್ನೆಲೆಯಲ್ಲಿ ದಾರಿಯು ಸರಿಯಾಯಿತೆಂದರೆ ಗುರಿಯು ದೊರೆತೇ ದೊರೆಯುತ್ತದೆನ್ನುವ ಅಮರ ತತ್ವ ಅಡಗಿದೆಯಲ್ಲವೇ ?

ಪ್ರಶ್ನೆಗಳು : ೧. ಬಿಥೋವನ್ ಗಾನಗೋಷ್ಠಿ ಕೇಳಿದ ಜನರ ಪ್ರತಿಕ್ರಿಯೆ ಹೇಗಿತ್ತು?

೨.ಬಿಥೋವನ್ ನ ಗಾನಮಾಧುರ್ಯಕ್ಕೆ ಮೆಚ್ಚುಗೆ ವ್ಯಕ್ತಪಡಿಸಿದ ಮಹಿಳೆಗೆ ಬಿಥೋವನ್ ನೀಡಿದ ಪ್ರತಿಕ್ರಿಯೆ ಏನು ?

ಭಾಗ - 'ಬಿ'

ಈ ಕೆಳಗಿನ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಆಯ್ಕೆಗಳನ್ನು ಕೊಡಲಾಗಿದೆ.ಅವುಗಳಲ್ಲಿ ಹೆಚ್ಚು ಸೂಕ್ತವಾದ ಉತ್ತರವನ್ನು ಆರಿಸಿ ,ಉತ್ತರಕ್ಕಾಗಿಯೇ ಕೊಟ್ಟಿರುವ ಜಾಗದಲ್ಲಿ ಕ್ರಮಾಕ್ಷರದೊಂದಿಗೆ ಉತ್ತರವನ್ನು ಬರೆಯಿರಿ. ೧೦*೧=೧೦

೩೧. ಕೆಳಗಿನ ಶಬ್ದಗಳಲ್ಲಿ ವಿಜಾತೀಯ ಸಂಯುಕ್ತಾಕ್ಷರ ಹೊಂದಿರುವ ಪದ :

(ಎ) ಮೆಚ್ಚು (ಬಿ) ಅಹಂಕೃತಿ (ಸಿ) ಸದ್ಗುಣ (ಡಿ) ಹಣ್ಣು

೩೨. 'ಮಂಡಳೇಶ್ವರ ' ಪದವು ಈ ಸಂಧಿಗೆ ಉದಾಹರಣೆಯಾಗಿದೆ:

(ಎ) ಗುಣಸಂಧಿ (ಬಿ) ಆದೇಶ ಸಂಧಿ (ಸಿ)ಸವರ್ಣದೀರ್ಘಸಂಧಿ (ಡಿ) ವೃದ್ಧಿಸಂಧಿ

೩೩. 'ಆದರೆ ಸಾಧಕನ ಕರ್ತವ್ಯವೇನು ' ಈ ವಾಕ್ಯದಲ್ಲಿರಬೇಕಾದ ಲೇಖನಚಿಹ್ನೆಯಿದು :

(ಎ) ಭಾವಸೂಚಕ (ಬಿ) ಪ್ರಶ್ನಾರ್ಥಕ (ಸಿ)ಅರ್ಧವಿರಾಮ (ಡಿ)ಪೂರ್ಣವಿರಾಮ

೩೪. 'ಇಳೆಯೊಳ್ ' ಈ ಪದದಲ್ಲಿರುವ ವಿಭಕ್ತಿಯಿದು :

(ಎ) ದ್ವಿತೀಯಾ (ಬಿ)ತೃತೀಯಾ (ಸಿ) ಸಪ್ತಮಿ (ಡಿ) ಪ್ರಥಮಾ

೩೫. 'ಗ್ರಾಮದೇವತೆ' ಪದವು ಈ ಸಮಾಸಕ್ಕೆ ಉದಾಹರಣೆಯಾಗಿದೆ.

(ಎ) ತತ್ಪುರುಷ (ಬಿ)ಗಮಕ (ಸಿ) ದ್ವಂದ್ವ (ಡಿ) ಕ್ರಿಯಾ

೩೬. ಇವುಗಳಲ್ಲಿ ಆತ್ಮಾರ್ಥಕ ಸರ್ವನಾಮಕ್ಕೆ ಉದಾಹರಣೆಯಿದು :

(ಎ) ಅವನು (ಬಿ) ತಾನು (ಸಿ) ನೀನು (ಡಿ) ನಾನು

೩೭. 'ಅದೇ ವೇಳೆಗೆ ಎದೆನಡುಗುವಂತೆ ಹುಲಿಯ ಗರ್ಜನೆ ಕೇಳಿಸಿತು '

ಈ ವಾಕ್ಯದಲ್ಲಿ ಬಳಕೆಯಾಗಿರುವ ನುಡಿಗಟ್ಟು:

(ಎ) ಅದೇ ವೇಳೆಗೆ (ಬಿ) ಕೇಳಿಸಿತು (ಸಿ)ಎದೆನಡುಗುವಂತೆ (ಡಿ) ಹುಲಿಯ ಗರ್ಜನೆ

೩೮. 'ಅಲ್ಲಿ ಹಿರಿದಾದ ತೊರೆಯು ಹರಿಯುತ್ತಿತ್ತು ' ಈ ವಾಕ್ಯವನ್ನು ವಿಧ್ಯರ್ಥಕ ರೂಪಕ್ಕೆ ಪರಿವರ್ತಿಸಿದರೆ ಕ್ರಿಯಾಪದವು ಹೀಗೆ ಬದಲಾಗುವುದು :

(ಎ)ಹರಿದೀತು (ಬಿ)ಹರಿಯಲಿ (ಸಿ)ಹರಿಯದು (ಡಿ)ಹರಿಯುತ್ತದೆ.

೩೯. ಇವುಗಳಲ್ಲಿ ಹಿಂದೂಸ್ಥಾನಿ ಭಾಷೆಯಿಂದ ಬಂದ ಪದವಿದು :

(ಎ) ಮೇಜು (ಬಿ) ಅರ್ಜಿ (ಸಿ) ಲೈಟು (ಡಿ)ಅಮಾನತು

೪೦.'ಇಸವಾಸ' ಪದದ ಗ್ರಾಂಥಿಕ ರೂಪವಿದು :

(ಎ)ಈ ಸಹವಾಸ (ಬಿ)ಸಹವಾಸ (ಸಿ) ವಿಶ್ವಾಸ (ಡಿ)ಈ ಶ್ವಾಸ

ಈ ಕೆಳಗಿನ ಮೊದಲೆರಡು ಪದಗಳಿಗೆ ಇರುವ ಸಂಬಂಧದಂತೆ ಮೂರನೆಯ ಪದಕ್ಕೆ ಸರಿ ಹೊಂದುವ ಸಂಬಂಧೀ ಪದವನ್ನು ಬರೆಯಿರಿ.

೪೧. ಆಗ್ನೇಯ : ದಿಗ್ವಾಚಕ :: ಹಲವು: __________

೪೨. ಅಹುದಹುದು : ದ್ವಿರುಕ್ತಿ :: ದುರುದುರು : _______

೪೩.ಜಾಣತನ : ತದ್ಧಿತಾಂತ ಭಾವನಾಮ :: ಅಂಜಿಕೆ : _______

೪೪:ಕಜ್ಜ : ಕಾರ್ಯ : ದಮ್ಮ :_______

೪೫ .ಈ ಕೆಳಗಿನ ಪದ್ಯಭಾಗಕ್ಕೆ ಪ್ರಸ್ತಾರ ಹಾಕಿ ,ಗಣವಿಭಾಗ ಮಾಡಿ,ಛಂದಸ್ಸಿನ ಹೆಸರು ಬರೆಯಿರಿ. ೧*೩=೩

ಕುರುಕುಳನಂದನಂ ಪವನನಂದನನೆಂಬ ಮದಾಂಧಗಂಧಸಿಂ

ಅಥವಾ

ವೀರ ಕೌರವರಾಯನೇ ದಾ
ತಾರನಾತನ ಹಗೆಯ ಹಗೆ ಕೈ
ವಾರವೇ ಕೈವಾರವಾದಂತಹೆನು ಕುರುನೃಪತಿ

೪೬. ಈ ಕೆಳಗಿನ ವಾಕ್ಯದಲ್ಲಿರುವ ಅಲಂಕಾರವನ್ನು ಹೆಸರಿಸಿ , ಲಕ್ಷಣ ಬರೆದು ಸಮನ್ವಯಿಸಿ . ೧*೩ =೩

'ವದನಾರವಿಂದ'

ಅಥವಾ

'ಪೆರ್ಮರನುಳಿವಂತೆ ನೀನುಳಿದೆ'

ಭಾಗ -'ಸಿ'

೪೭. ಈ ಕೆಳಗೆ ಕೊಟ್ಟಿರುವ ಗಾದೆಗಳಲ್ಲಿ ಯಾವುದಾದರೂ ಒಂದನ್ನು ವಿಸ್ತರಿಸಿ ಬರೆಯಿರಿ.

* ಆಳಾಗಿ ದುಡಿ ; ಅರಸಾಗಿ ಉಣ್ಣು.
* ಮೂರ್ತಿ ಚಿಕ್ಕದಾದರೂ ಕೀರ್ತಿ ದೊಡ್ಡದು
* ಹಾಸಿಗೆ ಇದ್ದಷ್ಟು ಕಾಲು ಚಾಚು

೪೮. ನಿಮ್ಮನ್ನು ಬನವಾಸಿಯ ಸರ್ಕಾರಿ ಪ್ರೌಢಶಾಲೆಯ 'ಅನುದೀಪ್' ಎಂದು ಭಾವಿಸಿಕೊಂಡು , ನಿಮ್ಮ ಶಾಲೆಯಲ್ಲಿ ಆಚರಿಸಿದ ವನಮಹೋತ್ಸವ ಕಾರ್ಯಕ್ರಮದ ವರದಿ ಪ್ರಕಟಿಸುವಂತೆ ಕೋರಿ ವಿಜಯವಾಣಿ ವಿದ್ಯಾರ್ಥಿಮಿತ್ರ ದಿನಪತ್ರಿಕೆಯ ಸಂಪಾದಕರಿಗೆ ಪತ್ರ ಬರೆಯಿರಿ.

ಅಥವಾ

ನಿಮ್ಮನ್ನು ರಾಮನಗರದ ಸರ್ಕಾರಿ ಪ್ರೌಢಶಾಲೆಯ 'ಪ್ರಣತಿ' ಎಂದು ಭಾವಿಸಿ , ಉಡುಪಿಯಲ್ಲಿ ವಾಸವಾಗಿರುವ ನಿಮ್ಮ ಸಹೋದರ 'ಪ್ರಣೀತ' ನಿಗೆ ವಿದ್ಯಾಭ್ಯಾಸದ ಪ್ರಗತಿ ತಿಳಿಸಿ ಪತ್ರ ಬರೆಯಿರಿ.

೪೯. ಈ ಕೆಳಗಿನ ವಿಷಯಗಳಲ್ಲಿ ಯಾವುದಾದರೂ ಒಂದನ್ನು ಕುರಿತು ಹದಿನೈದು ವಾಕ್ಯಗಳಿಗೆ ಕಡಿಮೆಯಿಲ್ಲದಂತೆ ಪ್ರಬಂಧ ಬರೆಯಿರಿ.

* ಮಕ್ಕಳ ಹಕ್ಕುಗಳು
* ಹೆಣ್ಣುಮಕ್ಕಳ ಮೇಲೆ ಹೆಚ್ಚುತ್ತಿರುವ ದೌರ್ಜನ್ಯ
* ಆಟಗಳ ಮಹತ್ವ